ಮಹಾ ಪ್ರಚಂಡ ರಾವಣನಿಗೆ ತಪಸ್ಸು ಮಾಡೋಕೆ ಒಂದು ಪ್ರಬಲ ಕಾರಣವಿತ್ತು. ಶಿವನನ್ನು ಒಲಿಸಿಕೊಳ್ಳಬೇಕು. ನೀವೂ ಅಷ್ಟೇ. ಕಷ್ಟಪಟ್ಟು ಒಲಿಸಿಕೊಳ್ಳಬೇಕು. ವರ್ಷವಾದರೂ ಸರಿ, ಹತ್ತು ವರ್ಷವಾದರೂ ಸೈ. ಸೌಭಾಗ್ಯ ದೇವತೆ ಲಕ್ಷ್ಮೀ ಎದುರಿಗೆ ಪ್ರತ್ಯಕ್ಷಳಾಗಬೇಕು.

ಏಳು ಕೋಟೆಯಾಚೆ ಶ್ರೀಮಂತ ರಾಜ್ಕುಮಾರಿ

ಕರ್ಕೊಂಡ್ ಬರ್ತೀರಾ ನೀವು?

■ ದಶರಥ ■ uvdasharatha@gmail.com

ಏಳು ಸಮುದ್ರದಾಚೆ ಇರೋ ಕೋಟೆ ತಲುಪಿದ ರಾಜಕುಮಾರನ ಕತೆ ಎಲ್ಲರಿಗೂ ನೆನಪಿರಬೇಕು. ಅಜ್ಜಿ ಕತೆ ಸುಮ್ಮನೆ ಅಲ್ಲ ಕಣ್ರೋ. ಅದೊಂದು ಪಾಠ. ಅದು ದಾರಿ. ನಿಮ್ಮ ಕೈಯಲ್ಲಿರೋ ಮೊಬೈಲಿನೊಳಗಿರುವ ಮ್ಯಾಪ್ ಅದು. ಆ ದಾರಿ ನಿಮ್ಮನ್ನು ಸರಿಯಾದ ಗುರಿಗೆ ತಲುಪಿಸುತ್ತದೆ.

ನಮ್ಮೂರ ಧಣಿಗಳು ತುಂಬಾ ಉತ್ಸಾಹದಲ್ಲಿದ್ದರು. ಮಾತು ನಿರರ್ಗಳ.

ರಾಜಕುಮಾರ ಅಷ್ಟೊಂದು ಕಷ್ಟ ಪಟ್ಟು ಏಳು ಸಮುದ್ರದಾಚೆ ಇರಬಹುದಾದ ಏರಲು ಸಾಧ್ಯವೇ ಇಲ್ಲದ ಗಟ್ಟಿಮುಟ್ಟು ಕೋಟೆಯನ್ನು ಹತ್ತಿದ್ದಾದರೂ ಯಾಕೆ? ಅಲ್ಲಿಗೆ ಹೋಗಲು ಅವನಿಗೇನು ಹುಚ್ಚಾ? ನೋ ನೋ.

ಅವನಿಗೊಂದು ಪ್ರಬಲವಾದ ಕಾರಣವಿತ್ತು. ಅಲ್ಲಿರುವ ರಾಜಕುಮಾರಿಯನ್ನು ರಾಕ್ಷಸನ ಕೈಯಿಂದ ಬಿಡಿಸಬೇಕು.

ಅದೊಂದೇ ಕಾರಣ. ಸ್ಟ್ರಾಂಗ್ ರೀಸನ್. ಎಷ್ಟೇ ಕಷ್ಟವಾದರೂ ಸರಿ ಅವಳನ್ನು ಕರೆದು ತಂದೇ ತರುತ್ತೇನೆ ಎಂದು ಹೊರಟ ರಾಜಕುಮಾರನಿಗೆ ಅಜ್ಜಿ ಹೇಳುತ್ತಿದ್ದ ಕತೆಯಲ್ಲಿ ಯೂವತ್ತೂ ಜಯ ಸಿಗುತ್ತಿತ್ತು. ಅಜ್ಜಿ ಹೇಳುವ ಕತೆಯಲ್ಲಷ್ಟೇ ಅಲ್ಲ, ಮುಂದಿನ ಜನರೇಷನ್‌ಗೆ ಹೇಳೋ ಕತೆಯಲ್ಲೂ ಹೀರೋ ಗೆದ್ದೇ ಗೆಲ್ಲುತ್ತೇನೆ.

ಎಷ್ಟೊಂದು ಸಿಂಪಲ್ ಕತೆ ಇದು. ಅದರಲ್ಲೇ ನಿಮ್ಮ ಗೆಲುವಿನ ಗುಟ್ಟೂ ಇದೆ. ಶ್ರೀಮಂತರಾಗಲು, ಗೆಲ್ಲಲು ಒಂದು ಕಾರಣವಿರಬೇಕು. ಹೇಗಾದರೂ ಸರಿಯೇ ಅದನ್ನು ಸಾಧಿಸಿ ತೋರಿಸುತ್ತೇನೆ ಅನ್ನೋ ಛಲ ಇರಬೇಕು. ಶ್ರೀಮಂತಿಕೆ ಅನ್ನುವುದೇ ರಾಜಕುಮಾರಿ ಅಂತ ನಂಬಿಕೊಳ್ಳಿ. ಆ ರಾಜಕುಮಾರಿಯನ್ನು ಒಲಿಸಿಕೊಳ್ಳಲು ಏಳು ಸಮುದ್ರ ದಾಟಲೇಬೇಕು. ಅಲ್ಲಿರೋ ಕೋಟೆ ಹತ್ತಲೇಬೇಕು. ಅದು ಅನುದಿನದ ಸಾಹಸ.

ಆ ದಾರಿಯಲ್ಲಿ ಕಲ್ಲು ಮುಳ್ಳುಗಳಿವೆ, ಮೊಸಳೆ ಶಾರ್ಕುಗಳಿವೆ, ತೋಳ ಸಿಂಹಗಳಿವೆ. ಕೊನೆಗೆ ರಾಕ್ಷಸನೂ ಇದ್ದಾನೆ. ನಂಬಿ ಅದನ್ನೆಲ್ಲಾ ಪಕ್ಕಕ್ಕೆ ಸರಿಸಿ ಗೆಲ್ಲುವ ಸಾಮರ್ಥ್ಯ ನಮಗಿದೆ. ಆದರೆ ಬಲವಾಗಿ ನಂಬಬೇಕಷ್ಟೇ. ರಾಜಕುಮಾರ ಮಾಡಿದ್ದು ಅದನ್ನೇ. ನಾನು ರಾಜಕುಮಾರಿಯನ್ನು ವಾಪಸ್ ಕರೆದುಕೊಂಡು ಬಂದೇ ಬರುತ್ತೇನೆ ಅನ್ನೋ ಅಚಲ ವಿಶ್ವಾಸವೇ ಗೆಲ್ಲಿಸಿದ್ದು.

ಹಾಗಂತ ರಾಜಕುಮಾರನಿಗೆ ಏನೂ ಗೊತ್ತಿರಲಿಲ್ಲ ಅಂತಲ್ಲ. ಆತ ದಿನಾ ಕತ್ತಿ ವರಸೆ ಕಲಿಯುತ್ತಿದ್ದ. ಕುದುರೆ ಸವಾರಿ ಕರಗತ ಮಾಡಿಕೊಂಡಿದ್ದ. ಅವನು ಸಿಕ್ಕಾಪಟ್ಟೆ ಯುದ್ಧಕಲೆಗಳಲ್ಲಿ ಪರಿಣತನಾಗಿದ್ದ.



ಸಿನಿಕರು, ನಿರ್ಲಕ್ಷ್ಯ ಮಾಡೋರು ಅವರ ಅವರ ದಾರಿಯನ್ನೇ ತಪ್ಪಿಸುವುದಲ್ಲದೆ ಉಳಿದವರ ಹಾದಿಯನ್ನೂ ತಪ್ಪಿಸಿಬಿಡುತ್ತಾರೆ.

ಶ್ರೀಮಂತಿಕೆ ಎಂಬ ರಾಜಕುಮಾರಿಯನ್ನು ಒಲಿಸಲು ಅಷ್ಟೆಲ್ಲಾ ಕಷ್ಟ ಪಡಬೇಕಾಗುತ್ತದೆ.

1. ಹ್ಯಾಬಿಟ್ಟು , 2. ರೀಸನ್ನು, 3. ಫ್ರೆಂಡ್ಸು, 4. ಆಯ್ಕೆ

1 ಹ್ಯಾಬಿಟ್ಟು

ಬಾಡಿ ಬೆಳೆಸಿಕೊಳ್ಳಲು ಜಿಮ್‌ಗೆ ಹೋಗೋರಿದ್ದಾರೆ. ಕತೆಗಳ ಲೋಕಕ್ಕೆ ಹೊರಟುಹೋಗಲು ಕಾದಂಬರಿ ಓದೋರಿರುತ್ತಾರೆ. ಶ್ರೀಮಂತರಾಗಬೇಕು ಅನ್ನೋ ಆಸೆ ಇರುವ ನೀವು ಏನು ಮಾಡುತ್ತೀರಿ? ನಿಮ್ಮ ಹ್ಯಾಬಿಟ್ ಏನು?

ರಾಜಕುಮಾರನ ಹ್ಯಾಬಿಟ್ಟು ಕುದುರೆ ಓಡಿಸುವುದು, ಕತ್ತಿ ವರಸೆ ಆಡೋದು. ಅದೇ ಅವನ ಶಕ್ತಿ. ನಿಮ್ಮ ಶಕ್ತಿ ಏನು?

ಇದುವರೆಗೆ ಶ್ರೀಮಂತರಾದವರು ಪ್ರತಿ ಕ್ಷಣ ಏನಾದರೊಂದು ಕಲಿಯುತ್ತಿರ್ತಾರೆ. ಒಬ್ಬನಿದ್ದಾನೆ ಆತ ಆಗಾಗ ತನ್ನ ಫೀಲ್ಡಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಓದುತ್ತಾ ಜ್ಞಾನ ಗಳಿಸುತ್ತಾನೆ. ಆಗಾಗ ಸೆಮಿನಾರುಗಳಲ್ಲಿ ಭಾಗವಹಿಸುತ್ತಾನೆ. ಡಿಸೈನರ್ ಒಬ್ಬನಿದ್ದಾನೆ. ಅವನು ತನಗಿಂತ ಶ್ರೇಷ್ಠ ಡಿಸೈನರ್‌ಗಳ ಮಾತು ಕೇಳಲು ಹೋಗುತ್ತಾನೆ.

ನಿಮ್ಮ ಹ್ಯಾಬಿಟ್ ನಿಮ್ಮ ಮುಂದೆ ಸಹಾಯ ಮಾಡುವಂತಿರಬೇಕು. ಗೆಲುವಿನ ದಾರಿಯಲ್ಲಿ ಹೋಗುವಾಗ ನಿಮ್ಮನ್ನು ಕಾಪಾಡುವಂತಿರಬೇಕು.

2 ರೀಸನ್ನು

ರಾಜಕುಮಾರನಿಗಿದ್ದಂತಹ ಸ್ಟ್ರಾಂಗು ರೀಸನ್ ಇರಲೇಬೇಕು. ಶಾಲೆಯಲ್ಲಿ ಒಬ್ಬ ಫ್ರೆಂಡಿದ್ದ. ಆತ ನಮ್ಮ ಜೊತೆ ತಿರುಗಾಡಲು ಬರುತ್ತಿರಲಿಲ್ಲ. ಪಾಠಗಳನ್ನು ತಪ್ಪಿಸುತ್ತಿರಲಿಲ್ಲ. ಯಾಕೋ ಹೀಗಿರ್ತಿ ಅಂತ ಕೇಳಿದ್ದಕ್ಕೆ ಹೇಳಿದ್ದ. ನಾನು ದೊಡ್ಡ ಜನ ಆಗಬೇಕು, ನಮ್ಮ ಮನೆಯವರನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು.

ಅವನು ದೊಡ್ಡೋನಾಗೋಕೆ ಒಂದು ಸ್ಟ್ರಾಂಗ್ ರೀಸನ್ ಇದೆ. ಅಪ್ಪ, ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳಬೇಕು.

ಮಹಾ ಪ್ರಚಂಡ ರಾವಣನಿಗೆ ತಪಸ್ಸು ಮಾಡೋಕೆ ಒಂದು ಪ್ರಬಲ ಕಾರಣವಿತ್ತು. ಶಿವನನ್ನು ಒಲಿಸಿಕೊಳ್ಳಬೇಕು ಅನ್ನೋದು. ಹಾಗಾಗಿ ಅವನು ಅದೆಷ್ಟೋ ವರ್ಷ ತಪಸ್ಸು ಮಾಡಿದ. ಅವನಂತೆ ಸುಮಾರು ಮಂದಿ ಋಷಿಗಳು ತಪಸ್ಸು ಮಾಡಿದ ಕತೆ ನೆನಪಿರಬಹುದು. ಅವರೆಲ್ಲರಿಗೂ ಒಂದೊಂದು ಕಾರಣಗಳಿದ್ದುವು. ಹಾಗಾಗೇ ಕಷ್ಟ ಪಟ್ಟು ಒಲಿಸಿಕೊಂಡರು. ನೀವು ಅಷ್ಟೇ. ನಿಮಗೂ ಒಂದು ಕಾರಣವಿದ್ದು. ನೀವೂ ಕಷ್ಟಪಟ್ಟು ಒಲಿಸಿಕೊಳ್ಳಬೇಕು. ವರ್ಷವಾದರೂ ಸರಿ, ಹತ್ತು ವರ್ಷವಾದರೂ ಸೈ. ಭಗವಂತ ಎದುರಿಗೆ ಪ್ರತ್ಯಕ್ಷನಾಗಬೇಕು.

3 ಫ್ರೆಂಡ್ಸು

ಗೆಲ್ಲೋ ಹಾದಿಯಲ್ಲಿ ಜೊತೆ ಇರುವವರು ಯಾರು ಅನ್ನುವುದು ಕೂಡ ಮುಖ್ಯವಾಗುತ್ತದೆ. ನನಗಿರೋ ಫ್ರೆಂಡ್ಸುಗಳಲ್ಲಿ ಬಹುತೇಕರು ಬಡತನದಿಂದ ಮೇಲೆ ಬಂದವರು. ಲೋನ್ ತೆಗೆದುಕೊಂಡು ಬದುಕಿದವರೇ ಈಗ ತುಂಬಾ ಎತ್ತರಕ್ಕೆ ಬೆಳೆದವರು. ಹುಡ್ಗರ ಭಾಷೆಯಲ್ಲಿ ಹೇಳಬಹುದಾದರೆ ಅವರು ವೇಸ್ಟ್ ಬಾಡಿಗಳಲ್ಲ. ಏನಾದರೊಂದು ಮಾಡುತ್ತಲೇ ಇರುತ್ತಾರೆ.

ಫ್ರೆಂಡ್ಸ್‌ಗಳನ್ನು ಮಾಡುವಾಗ ಅವರ ಹತ್ತಿರ ದುಡ್ಡಿದೆಯಾ ಅಂತ ನೋಡಿ ಫ್ರೆಂಡ್ಸ್ ಮಾಡ್ಕೊಳೋದಲ್ಲ. ಅವರ ತಲೆಯಲ್ಲಿ ಏನಿದೆ ಅನ್ನೋದು ಮುಖ್ಯ. ಫ್ರೆಂಡ್ಸುಗಳೆಲ್ಲರ ಹತ್ತಿರ ಏನಾದರೂ ಕಲಿಯುವಂತಿರಬೇಕು. ಕ್ಷಣಕ್ಷಣಕ್ಕೂ ಬೆಳೆಯುತ್ತಿರಬೇಕು. ಜ್ಞಾನವರ್ಧಿಸುವ ಫ್ರೆಂಡ್ಸಿದ್ದರೆ ಗೆಲುವು ತುಂಬಾ ಸುಲಭ. ಹಾದಿ ತಪ್ಪಿಸುವ ಫ್ರೆಂಡ್ಸುಗಳಿಂದ ಯಾವತ್ತೂ ಕಷ್ಟವೇ.

ಸಿನಿಕರು, ನಿರ್ಲಕ್ಷ್ಯ ಮಾಡೋರು ಅವರ ಅವರ ದಾರಿಯನ್ನೇ ತಪ್ಪಿಸುವುದಲ್ಲದೆ ಉಳಿದವರ ಹಾದಿಯನ್ನೂ ತಪ್ಪಿಸಿಬಿಡುತ್ತಾರೆ.

4 ಆಯ್ಕೆ

ಪ್ರತಿ ದಿನ ಪ್ರತಿ ಕ್ಷಣ ನಿಮ್ಮ ಮುಂದೆ ಹಲವಾರು ಆಯ್ಕೆಗಳಿರುತ್ತವೆ. ಒಂದು ಗೆಲುವಿಗೆ ಬೇಕಾದ ಆಯ್ಕೆ. ಮತ್ತೊಂದು ಉದಾಸೀನ. ಈಗ್ಲೇ ಮಾಡ್ತೀನಿ ಅನ್ನೋದು ಒಂದು. ಆಮೇಲೆ ನೋಡೋಣ ಅನ್ನೋದು ಮತ್ತೊಂದು. ನಾನು ಶ್ರೀಮಂತನಾಗಲೇಬೇಕು ಅನ್ನೋ ಆಯ್ಕೆ ಒಂದು. ಮತ್ತೊಂದು ನಾಳೆ ಯೋಚಿಸೋಣ ಅನ್ನೋದು. ನಿಮ್ಮ ಆಯ್ಕೆ ನಿಮ್ಮ ಕೈಯಲ್ಲೇ ಇರುತ್ತದೆ. ಆ ಆಯ್ಕೆಯ ಮೇಲೆ ನಿಮ್ಮ ಯಶಸ್ಸು ನಿರ್ಧಾರವಾಗುತ್ತದೆ. ಅರ್ಥ ಮಾಡ್ಕೋಬೇಕಾದವರು ನೀವು. ಅರ್ಥ ಮಾಡ್ಕೊಳ್ಳಿ.

ನಮ್ಮೂರ ಧಣಿಗಳು ಒಂದು ಕ್ಷಣ ಮೌನವಾದರು. ಸುದೀರ್ಘ ನಿಟ್ಟುಸಿರು.

ಮುಂದಿನ ವಾರ ಫಾರ್ಮುಲಾಗಳು ವರ್ಕಾಗುತ್ತಾ?



ಹೂಡಿಕೆ ಮಾಡಿದರೆ ಗೆಲ್ಲುತ್ತೀರಿ ಮಾಡದೇ ಹೋದರೆ ಕಳ್ಕೋತೀರಿ

2014ರಲ್ಲಿ ಹೂಡಿಕೆ ಮಾಡಲು ಆರಂಭಿಸಿ. ಭಾರತೀಯ ಕಂಪೆನಿಗಳ ಮಾಲೀಕರಾಗಲು ಬಯಸುತ್ತಿರೋ ಅಥವಾ ಆ ಕಂಪೆನಿಗಳ ಸಾಮಾನ್ಯ ಗ್ರಾಹಕರಾಗಿರಲು ಬಯಸುತ್ತಿರೋ ...

ಪುಟ 1

ಏಕೆಂದರೆ ಪಿವಿಆರ್, ಐನಾಕ್ಸ್ ಕಂಪೆನಿಗಳ ಷೇರುಗಳನ್ನು ಮತ್ತಷ್ಟು ಖರೀದಿಸುತ್ತೇನೆ. ಕಳೆದ ಐದು ವರ್ಷಗಳಲ್ಲಿ ನನಗದು ಕ್ರಮವಾಗಿ ಆರು ಮತ್ತು ಮೂರವರೆ ಪಟ್ಟು ಲಾಭವನ್ನು ನೀಡಿದೆ.

ಯಾವ ಸಿನಿಮಾ ನೋಡೋದು ಸ್ವಾಮಿ?

ಯಾವ ಸಿನಿಮಾ ನೋಡೋದು ಸ್ವಾಮಿ? ಯಾವುದೂ ಕೂಡ ಚೆನ್ನಾಗಿ ಬರುತ್ತಿಲ್ಲ. ಅದೇ ಹಳೆಯ ಕಥೆ ... ಹೊಸ ರೀಲು... ಮನೆಯಲ್ಲಿ ಡಿ.ಟಿ. ಹೆಚ್ ಇದೆ. ಮನೆಯಲ್ಲೇ ಕುಳಿತು ಹಾಯಾಗಿ ಟೀವಿಯಲ್ಲೇ ನೋಡೋಣ ಅಂತೀರಾ? ಓಕೆ. ಹಾಗೇ ಮಾಡಿ ಸ್ವಾಮಿ. ನಿಮ್ಮ ಆಸೆಯನ್ನು ದೂರಲು ನಾನ್ಯಾರು? ನಾನು ನಿಮ್ಮನ್ನು ಮತ್ತಷ್ಟು ಇಷ್ಟಪಡುತ್ತೇನೆ. ಕಾರಣ ಇಷ್ಟೇ. ಝೀ ಟೆಲಿಫಿಲಮ್ಸ್ ಮತ್ತು ಸನ್ ಟಿವಿಯ ಷೇರುಗಳ ನನಗೆ ನಾಲ್ಕು ಮತ್ತು ಎರಡೂವರೆ ಪಟ್ಟು ಲಾಭವನ್ನು ನೀಡಿದೆ. ಇದಕ್ಕಿಂತ ಇನ್ನೇನು ಬೇಕು ಹೇಳಿ?

ಎಷ್ಟು ದಿನ ಅಂತ ಮನೆಯ ತಿಂಡಿ ತಿನ್ನೋದು? ಪಿಝಾ, ಬರ್ಗರ್ ಅಥವಾ ಫಾಸ್ಟ್ ಫುಡ್ ತಿನ್ನದಿದ್ದರೆ ಹೇಗೆ ಸ್ವಾಮಿ? ಅಂತೀರಾ...ತಿನ್ನಿ, ತಿನ್ನಿ. ನನಗಂತೂ ಹಾಲು ಕುಡಿದಷ್ಟು ಖುಷಿ ಆಗುತ್ತೆ. 2010ರಿಂದ ಡೊಮಿನೋ ಕಂಪೆನಿಯ ಮಾಲೀಕರಾದ ಜುಲಿಬಿಯಂಟ್ ಫುಡ್ ವರ್ಕ್ಸ್ ಷೇರುಗಳು ಎಂಟು ಪಟ್ಟು ಲಾಭವನ್ನು ನೀಡುತ್ತಿದೆ. 2012ರಿಂದ ಮೆಕ್ ಡೋನಾಲ್ಡ್‌ನ ಮಾಲೀಕರಾದ ವೆಸ್ಟ್ ಲೈಫ್‌ನ ಷೇರುಗಳು ನನಗೆ ಹತ್ತು ಪಟ್ಟು ಲಾಭವನ್ನು ನೀಡಿದೆ. ನೀವು ತಿನ್ನುವುದನ್ನು ಬಿಡಬೇಡಿ. ಇನ್ನೂ ಜಾಸ್ತಿ ತಿನ್ನುತ್ತಿರಿ. ನನಗೋ ಪಾಯಸ ಕುಡಿದಷ್ಟೇ ಖುಷಿಯಾಗುತ್ತದೆ. ಜೇಬು ತುಂಬ ದುಡ್ಡು ಹರಿದು ಬರುತ್ತದೆ.

ದಯವಿಟ್ಟು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಕುಡಿಯುವುದನ್ನು ಮತ್ತು ಸಿಗರೇಟು ಸೇದುವುದನ್ನು ಬಿಡುತ್ತೇನೆ ಎಂದು ಠರಾವು ಮಾಡಬೇಡಿ. ನೀವು ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡದಿದ್ದರೂ ಪರವಾಗಿಲ್ಲ. ಆದರೆ ಸಿಗರೇಟು ಮತ್ತು ಆಲ್ಕೋಹಾಲ್ ಕಂಪೆನಿಗಳು ಷೇರುಗಳ ಮೇಲೆ ಹಣ ಹೂಡಿರುವ ಹೂಡಿಕೆದಾರರ ಬಗ್ಗೆ ಸ್ವಲ್ಪ ಆಲೋಚಿಸಿ. ಕಳೆದ ಐದು ವರ್ಷಗಳಲ್ಲಿ ನಿಮ್ಮ ಕೃಪಾಕಟಾಕ್ಷದಿಂದ ಐಟಿಸಿ ಕಂಪೆನಿಯಿಂದ ಮೂರವರೆ ಪಟ್ಟು, ಯುನೈಟೆಡ್ ಬ್ರೇವರೀಸ್ ಕಂಪೆನಿಯಿಂದ ಒಭತ್ತೂವರೆ ಪಟ್ಟು ಹಾಗೂ ಯುನೈಟೆಡ್ ಸ್ಪಿರಿಟ್ಸ್‌ನಿಂದ ಮೂರು ಪಟ್ಟು ಲಾಭವನ್ನು ಹೂಡಿಕೆದಾರರು ಪಡೆದಿದ್ದಾರೆ ಸ್ವಾಮಿ. ನಿಮ್ಮ ಕೃಪಾಕಟಾಕ್ಷ ಹಾಗೂ ಶ್ರೀರಕ್ಷೆ ಸದಾ ಅವರ ಮೇಲೆ ಹಾಗೇ ಇರಲಿ.

ನಿಮಗೆಲ್ಲರಿಗೂ ಸಂಕ್ರಾಂತಿ, ಯುಗಾದಿ ಹಬ್ಬದ ಶುಭಾಷಯಗಳು. ದೇವರು ನಿಮ್ಮನ್ನು ಸದಾ ಆರೋಗ್ಯವಾಗಿಟ್ಟಿರಲಿ. ಆದರೆ ಒಂದು ವೇಳೆ ನೀವು ಆಸ್ಪತ್ರೆಗೆ ಹೋಗುವಾಗ ಒಂದು ವಿಷಯವನ್ನು ನೆನಪಿಟ್ಟು ಕೊಳ್ಳಿ. ಅಪೋಲೋ ಹಾಸ್ಪಿಟಲ್‌ನ ಷೇರುಗಳು ನನಗೆ ನಾಲ್ಕು ಪಟ್ಟು ಹೆಚ್ಚು ಲಾಭ ತಂದು ಕೊಟ್ಟಿದೆ. ಇದಕ್ಕಾಗಿ ಹೃದಯಪೂರ್ವಕ ಧನ್ಯವಾದಗಳು. ನೀವು ಅನಾರೋಗ್ಯದಿಂದ ಬಳಲುತ್ತಿದ್ದರೆ ಸಮಾಧಾನಪಟ್ಟುಕೊಳ್ಳಿ. ಲ್ಯೂಪಿನ್ ಹಾಗೂ ಸಿಪ್ಲಾ ಕಂಪೆನಿಯ ಸ್ಟಾಕುಗಳಿಂದ ಹೂಡಿಕೆದಾರರು ಕ್ರಮವಾಗಿ ಏಳೂವರೆ ಮತ್ತು ಎರಡು ಪಟ್ಟು ಲಾಭವನ್ನು ಗಳಿಸಿದ್ದಾರೆ. ನಿಮ್ಮ ಅನಾರೋಗ್ಯ ಅವರ ಆರ್ಥಿಕ ಆರೋಗ್ಯವನ್ನು ನೀಡಿದೆ.

ನೀವು ಇರುವ ರೀತಿಯನ್ನು ನಾನು ಇಷ್ಟಪಡುತ್ತೇನೆ. ನಾನು ಆನಂದಪಡುವ ಷೇರುಗಳ ಕಂಪೆನಿಗಳ ನಿಷ್ಠಾವಂತ ಗ್ರಾಹಕ ದೇವರಗಳು ನೀವು. ಆದರೂ ಕೂಡ ನಾನು ನಿಮಗೆ ಆತ್ಮೀಯವಾಗಿ ಆಹ್ವಾನಿಸುತ್ತೇನೆ. 2014ರಲ್ಲಿ ಹೂಡಿಕೆ ಮಾಡಲು ಆರಂಭಿಸಿ. ಭಾರತೀಯ ಕಂಪೆನಿಗಳ ಮಾಲೀಕರಾಗಲು ಬಯಸುತ್ತಿರೋ ಅಥವಾ ಆ ಕಂಪೆನಿಗಳ ಸಾಮಾನ್ಯ ಗ್ರಾಹಕರಾಗಿರಲು ಬಯಸುತ್ತಿರೋ ...

ನಿಮ್ಮ ವಿವೇಚನೆಗೆ ಬಿಟ್ಟದ್ದು. ಹೂಡಿಕೆ ಇವತ್ತಿಂದಲೇ ಶುರುಮಾಡಿ.

ಮಾರ್ಕೆಟ್ ಮಿಂಚು

ರೊಮ್ಯಾಂಟಿಕ್ ಕತೆಯಲ್ಲಿ ಟ್ವಿಸ್ಟು

ನಾರು ಮುಡಿ ಉಟ್ಟುಕೊಂಡು ಕಾಡಿನಲ್ಲಿ ಹೂ ಕೀಳುತ್ತಿದ್ದ ಶಕುಂತಳೆಯನ್ನು ಕಂಡು ಲವ್ ಅಟ್ ಫರ್ಸ್ಟ್ ಸೈಟ್ ಆಗಿ ದುಷ್ಯಂತ ಮಹಾರಾಜ ಅವಳನ್ನು ಒಲಿಸಿ ಮೋಹಿಸಿ ಪ್ರೀತಿಸಿದ ರೊಮ್ಯಾಂಟಿಕ್ ಕತೆ ನಮಗೆ ನಿಮಗೆ ಅಷ್ಟೇ ಅಲ್ಲ ಫ್ಯೂಷನ್ ಬೀಟ್ಸ್ ಕಂಪನಿಗೂ ಗೊತ್ತಾಗಿದೆ ಗೊತ್ತಾ? ಹಾಗಾಗೇ ಕ್ಲೋಸ್ ಟು ನೇಚರ್ ಅನ್ನೋ ಕಲೆಕ್ಷನ್ ರಿಲೀಸ್ ಮಾಡಿದ್ದು. ಪ್ರಕೃತಿಯ ಅಂದಚೆಂದವನ್ನು ಬಟ್ಟೆಗಳಲ್ಲಿ ಕಟ್ಟಿ ಕೊಟ್ಟು ಎಲ್ಲರಿಗೂ ಬಟ್ಟೆ ಮೇಲೆ ಲವ್ವಾಗಿಸಬೇಕು ಅನ್ನೋ ಉದ್ದೇಶ ಕಂಪನಿಗೆ ಇದ್ದಂತಿದೆ. ಅದರಂತೆ ಡ್ರೆಸ್ಸುಗಳು ತಯಾರಾದಂತಿದೆ. ಅನುಮಾನವಿದ್ದರೆ ನೇರವಾಗಿ ನೋಡಿ ಭೂತ ಕಣ್ಣುಗಳಲ್ಲಿ ಪರೀಕ್ಷಿಸಿಕೊಳ್ಳಿ. ಈ ಕಲೆಕ್ಷನ್‌ನ ಆರಂಭಿಕ ಬೆಲೆ ರೂ. 1399.

ಮಲಗು ಮಲಗು ಚಾರುಲತೆ

ಹೊದಿಕೆ, ದಿಂಬು ನೋಡಿದ್ರೆ ಮಲಗಬೇಕು ಮಲಗಬೇಕು ಅನ್ನಿಸಬೇಕು. ನಮ್ಮ ಮುಂದೆ ಇರುವ ಏಕೈಕ ಗುರಿ ಅದೊಂದೇ ಅಂತ ಹೇಳ್ತಿರೋ ಬ್ರಾಂಡ್ ಹೆಸರು ಮೈಶಾ. ಮಾಂತ್ರಿಕ ಬಣ್ಣಗಳಲ್ಲಿ ಅವರು ಸೆರೆನಿಟಿ ಕಲೆಕ್ಷನ್ ರಿಲೀಸ್ ಮಾಡಿದ್ದಾರೆ. ಹೇಗಿದೆ ಏನ್ ಕತೆ ಅಂತ ತಿಳ್ಕೋಬೇಕಾದರೆ ಸದ್ಯಕ್ಕೆ ಫೋಟೋ ನೋಡಿ. ಫೋಟೋ ನೋಡಿ ನೀವು ಹೇಗೆ ನಿದ್ದೆ ಬರಬಹುದು, ಹೇಗೆಲ್ಲಾ ಮಲ್ಕೋಬಹುದು ಅಂತ ಕಲ್ಪಿಸಿಕೊಳ್ಳಬಹುದು. ಕಲ್ಪನೆಗೆ ದುಡ್ಡಿಲ್ಲ. ಅದನ್ನೆಲ್ಲಾ ಹಿಡ್ಕೊಂಡು ಲೈವ್ ಆಗಿ ಕನಸು ಕಾಣಬೇಕಾದರೆ ಸ್ವಲ್ಪ ಖರ್ಚು ಮಾಡಬೇಕು. ಪ್ರತೀ ಸೆಟ್ (ಒಂದು ಬೆಡ್ ಶೀಟ್ ಮತ್ತು ಎರಡು ಪಿಲ್ಲೋ ಕವರ್) ಬೆಲೆ ರೂ. 4995. ಕನಸು ಫುಲ್ ರಿಚ್ಚು ಗುರೂ.ರೂ.15.

ಹ್ಯಾಪ್ಪೀ ಜರ್ನಿ

ಪಾಸ್ ಆಗಿ ಪ್ರವಾಸಕ್ಕೆ ಹೊರಟವರಿಗೆ ತುಂಬಾ ಸುಲಭ ಆಗಲಿ ಅಂತ ಹಲವಾರು ಕಂಪನಿಗಳು ಹಲವಾರು ಥರದ ಬ್ಯಾಗ್‌ಗಳನ್ನು ರೆಡಿ ಮಾಡಿಟ್ಟಿರುತ್ತಾರೆ. ಗಟ್ಟಿಮುಟ್ಟಾದ, ಚೆಂದ ಕಾಣುವ ಬ್ಯಾಗ್‌ಗಳನ್ನು ಹಿಡ್ಕೊಂಡು ಆರಾಮಾಗಿ ಹೋಗಬಹುದು. ಈಗ ಹ್ಯಾಪ್ಪಿ ಜರ್ನಿ ಹೇಳ್ತಿರೋದು ಸಫಾರಿ ಕಂಪನಿ. ಅವರು ಹೊಚ್ಚ ಹೊಸ ನೋವಾಟೆಕ್ ಟ್ರೌಸೀ ಬ್ಯಾಗ್‌ಗಳನ್ನು ರಿಲೀಸ್ ಮಾಡಿದ್ದಾರೆ. ಆರಂಭಿಕ ಬೆಲೆ ರೂ. 4885. ಜಗತ್ತು ಚೆನ್ನಾಗಿದೆ, ಕಾಸ್ಟ್ಲೀ ಕನಸುಗಳಿವೆ ಅಂತ ನಂಬಿಕೊಂಡಿರುವವರು ಸಫಾರಿಗೆ ಹೊರಡಬಹುದು. ಮನೆ ಮಂದಿ ಹತ್ತಿರ ಕಷ್ಟ ಸುಖ ಮಾತಾಡ್ಕೊಂಡು ನಿರ್ಧರಿಸುವುದು ಏನಕ್ಕೂ ಒಳ್ಳೆಯದು.

ಎದ್ದು ಕಾಣೋ ಕಣ್ಣುಗಳು

ಚೆಂದ ಕಾಣ್ತಿದ್ದಿ ಅಂತ ಹೇಳಿದ್ರೆ ಸಾಕು ನೂರು ಮಹಡಿ ಬ್ಲಿಡಿಂಗಿನ ಟಾಪ್ ಫ್ಲೋರಲ್ಲಿ ಡಾನ್ಸ್ ಮಾಡಿದಂತೆ ಖುಷಿಯಾಗೋ ಜೀವಗಳಿವೆ. ಹಾಗೆ ಖುಷಿಯಾಗಲೆಂದೇ ಪದೇ ಪದೇ ಪ್ರೊಡಕ್ಟು ರಿಲೀಸ್ ಮಾಡುವ ಕಂಪನಿಗಳಿವೆ. ಹಾಗೆ ಖುಷಿಯನ್ನು ಪುಕ್ಕಟೆಯಾಗಿ ಕೊಡುವುದಿಲ್ಲ. ಫೀಸ್ ಕಲೆಕ್ಟ್ ಮಾಡಿಕೊಳ್ಳುತ್ತದೆ. ಅಂಥಾ ಕಂಪನಿಗಳಲ್ಲೊಂದಾದ ಓರಿಫ್ಲೇಮ್ ಹೆಣ್ಣಕ್ಕಳು ಚೆ